ಇ) ಹೌದು.

ಸಂಕೇಶ್ವರ ಪಟ್ಟಣದಲ್ಲಿ ನೀರು ಸರಬರಾಜು ಪೈಪುಗಳನ್ನು ಬದಲಾಯಿಸುವುದು

676 (1159) - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಕೇಶ್ವರ ಪಟ್ಟಣದಲ್ಲಿ ಹಳೆಯ ನೀರು ವಿತರಣಾ ಪೈಪ್‌ಗಳನ್ನು ಬದಲಾಯಿಸಿ ಹೊಸ ಪೈಪ್‌ಗಳನ್ನು ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಇವುಗಳನ್ನು ಯಾವಾಗ ಬದಲಾಯಿಸಲಾಗುವುದು?

ಇ) ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು? ಇದರ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) ಇದೆ.

ಆ) ಸದರಿ ಯೋಜನೆಯ ರೂ. 404.00 ಲಕ್ಷ ಗಳ ಅಂದಾಜು ಪಟ್ಟಿ ತಯಾರಿಸಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಮೇಲಿನಂತೆ.

ಹುಕ್ಕೇರಿ ತಾಲ್ಲೂಕಿನ ಕಮತನೂರು ಕೆರೆ ನಿರ್ಮಾಣ

977 (1160) - ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ್ (ಸಂಕೇಶ್ವರ್): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಕಮತನೂರ ಕೆರೆ ಪುನರ್ ನಿರ್ಮಾಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು; ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ವಿವರಗಳನ್ನು ಒದಗಿಸುವುದು;

ಇ) ನಬಾರ್ಡ್ ಯೋಜನೆಯಲ್ಲಿ ಈ ಕಾಮಗಾರಿಯನ್ನು ತೆಗೆದುಕೊಂಡಿದ್ದರೂ ಇಲ್ಲಿಯವರೆಗೆ ಇದರ ಕಾಮಗಾರಿಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಕಮತನೂರು ಕೆರೆಯ ಒಡ್ಡಿನ ಚೈನೇಜ್ 443 ರಿಂದ 540ರ ವರೆಗಿನ ಕುಸಿತದ ಕಾಮಗಾರಿಯ ಅಂದಾಜನ್ನು ತಯಾರಿಸಿದ್ದು,ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿದೆ. ಸಮಿತಿಯ ಅನುಮೋದನೆ ಪಡೆದು ಶೀಘ್ರದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಒಡ್ಡಿನ ಮರು ನಿರ್ಮಾಣದ ಅಂದಾಜು ವೆಚ್ಚ ರೂ. 164.50 ಲಕ್ಷ. ಕಾಮಗಾರಿಯನ್ನು ಇನ್ನೂ ಪ್ರಾರಂಭಿಸದಿರುವುದರಿಂದ ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ಈ ಕಾಮಗಾರಿಯು ನಬಾರ್ಡ್ ಯೋಜನೆಯಡಿ ಸೇರಿದೆ. ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿಯಿಂದ ಕಾಮಗಾರಿಯ ಸ್ಥಳ ಪರಿವೀಕ್ಷಣೆ ಮತ್ತು ಅಂದಾಜಿಗೆ ಅನುಮೋದನೆ ಪಡೆಯಬೇಕಾಗಿರುವುದರಿಂದ ಇನ್ನೂ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.